# ವಿದ್ವಾಂಸರಿಂದಲೇ ಹುಟ್ಟಿದ ಏಕೈಕ ಸಂಸ್ಥೆ

ಕರ್ನಾಟಕ ಗಾನಕಲಾ ಪರಿಷತ್ತಿನಲ್ಲಿ ಕಳೆದ 15 ವರ್ಷಗಳಿಂದ ಅಧ್ಯಕ್ಷರಾಗಿರುವ ಕರ್ನಾಟಕ ಶಾಸ್ತ್ರೀಯ ಸಂಗೀತದ ಮೇರುಗಾಯಕ ವಿದ್ವಾನ್ ಆರ್.ಕೆ. ಪದ್ಮನಾಭ ಅವರು ಪರಿಷತ್ತಿನ ಕಾರ್ಯಚಟುವಟಿಕೆಗಳ ಬಗ್ಗೆ ಅನಿಸಿಕೆಗಳನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.

- ಕರ್ನಾಟಕ ಗಾನಕಲಾ ಪರಿಷತ್ತು ಐವತ್ತು ವರ್ಷ ಪೂರೈಸಿದೆ. ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಹಿಂತಿರುಗಿ ನೋಡಿದಾಗ ಏನನಿಸುತ್ತದೆ?

ಸಂಗೀತ ವಿದ್ವಾಂಸರೇ ಶುರು ಮಾಡಿ ವಿದ್ವಾಂಸರೇ ನಡೆಸುತ್ತಿರುವ ಏಕೈಕ ಸಂಸ್ಥೆ ಇದು. ಈ ಸಂಸ್ಥೆಯಲ್ಲಿರುವ ಅಧ್ಯಕ್ಷರಿಂದ ಹಿಡಿದು ಎಲ್ಲ ಸದಸ್ಯರೂ ಸಂಗೀತಗಾರರೇ ಆಗಿರಬೇಕು ಎಂಬುದು ನಿಯಮ. ಜೊತೆಗೆ ತಜ್ಞರ ಸಮಿತಿಯಲ್ಲಿ 25 ಸದಸ್ಯರಿದ್ದು, ಇವರೆಲ್ಲರೂ ಸಂಗೀತಗಾರರೇ ಆಗಿದ್ದಾರೆ. ಇಲ್ಲಿ ಕರ್ನಾಟಕ ಸಂಗೀತಕ್ಕೇ ಆದ್ಯತೆ. ಸಂಗೀತದ ಇತರ ಶೈಲಿ, ಪ್ರಕಾರಗಳಿಗೆ ಬೇರೆ ಬೇರೆ ಸಂಸ್ಥೆಗಳಿರುವುದರಿಂದ ಇದನ್ನು ಕರ್ನಾಟಕ ಸಂಗೀತಕ್ಕೆ ಮಾತ್ರ ಮೀಸಲಿರಿಸಿದ್ದೇವೆ. ಹಾಗೆಂದು ಸಂಗೀತ ವಿದ್ವಾಂಸರಾದ ಪಂ. ಶೇಷಾದ್ರಿ ಗವಾಯಿ, ವಿದುಷಿ ಲಲಿತ ಉಭಯಕರ, ಬಾಳಪ್ಪ ಹುಕ್ಕೇರಿ ಅವರೂ ಕೆಲಕಾಲ ಸಮಿತಿಯಲ್ಲಿ ಸೇವೆ ಸಲ್ಲಿಸಿದ್ದರು. ಸಂಗೀತ ಸಮ್ಮೇಳನ, ಗೋಷ್ಠಿಗಳು, ಪ್ರಾತ್ಯಕ್ಷಿಕೆ, ಶಿಬಿರಗಳು, ಸಾಧಕರಿಗೆ ಸನ್ಮಾನ ಮೊದಲಾದ ಕಾರ್ಯಕ್ರಮಗಳನ್ನು ಪ್ರತೀ ವರ್ಷ ಆಯೋಜಿಸುತ್ತಾ ಬಂದಿದ್ದೇವೆ.

- ಸಂಗೀತ ವಿದ್ವಾಂಸರ ಜೊತೆಗೆ ಆಸಕ್ತರು, ಸಂಗೀತ ಪೋಷಕರನ್ನೂ ಸೇರಿಸಿದರೆ ಸಂಸ್ಥೆ ಇನ್ನಷ್ಟು ವಿಸ್ತಾರವಾಗಿ ಇನ್ನೂ ಹೆಚ್ಚಿನ ಸಂಗೀತ ಸೇವೆಗೆ ಅವಕಾಶ ಕಲ್ಪಿಸಿದಂತಾಗುವುದಿಲ್ಲವೇ?

ಈ ಸಂಸ್ಥೆಯಲ್ಲಿ ಸಂಗೀತ ವಿದ್ವಾಂಸರೇ ಸದಸ್ಯರು. ಏಕೆಂದರೆ ವಿದ್ವಾಂಸರಿಗೆ ಒಬ್ಬ ಕಲಾವಿದನ ನಾಡಿಮಿಡಿತದ ಅರಿವಿರುತ್ತದೆ. ಅವರಲ್ಲಿರುವ ಕಲೆ, ಸಾಧನೆ, ಗುಣಮಟ್ಟ ಹಾಗೂ ಆತನಿಗೆ ನಿಜವಾಗಿಯೂ ಸಂಗೀತಕ್ಕೆ ತುಡಿಯುವ ಸಾಮರ್ಥ್ಯ ಇದೆಯೇ ಎಂಬ ಅರಿವು ಇರುತ್ತದೆ. ಯಾವುದು ಒಳ್ಳೆಯ ಸಂಗೀತ, ಯಾರನ್ನು ಪೋಷಿಸಬಹುದು, ಯಾವ ಕಲಾವಿದರು ವೇದಿಕೆಯಲ್ಲಿ ಕಛೇರಿ ಕೊಡಲು ಅರ್ಹರು ಎಂಬುದನ್ನು ನಿರ್ಧರಿಸಲು ಸಾಧ್ಯವಾಗುತ್ತದೆ.

- ಸಂಗೀತ ಸಮ್ಮೇಳನದಲ್ಲಿ ಗಾಯನ–ವಾದನ ಕಛೇರಿಗಳಲ್ಲದೆ ಇನ್ನಾವ ಕಾರ್ಯಕ್ರಮ, ಯೋಜನೆಗಳಿವೆ?

ಹಿರಿಯ ಕಲಾವಿದರ ಜನ್ಮಶತಾಬ್ದಿ ಅಂಗವಾಗಿ ಅವರ ಹೆಸರಿನಲ್ಲಿ ವಿದ್ವತ್‌ಗೋಷ್ಠಿ (ಉದಾ: ವೀಣೆ ದೊರೆಸ್ವಾಮಿ ಅಯ್ಯಂಗಾರ್), ಸಂಗೀತಕ್ಕೆ ಸಂಬಂಧಿಸಿದ ಒಟ್ಟು ಆರು ಪುಸ್ತಕಗಳ ಪ್ರಕಟಣೆ ಹಾಗೂ ಬಿಡುಗಡೆ. ಗಾನಕಲಾ ಮಂಜರಿ,



ಸುವರ್ಣ ಮಹೋತ್ಸವ ಸಂಗೀತ ಸಮ್ಮೇಳನಾಧ್ಯಕ್ಷರಾದ ಮೈಸೂರು ನಾಗರಾಜ್– ಮೈಸೂರು ಮಂಜುನಾಥ್



ವಿದ್ವಾನ್ ಆರ್.ಕೆ. ಪದ್ಮನಾಭ

ತುಳಜೇಂದ್ರ ಮಹಾರಾಜರ ಸಂಗೀತ ಸಾರಾಮೃತ ಪುಸ್ತಕವನ್ನು ಕನ್ನಡಕ್ಕೆ ವಿದುಷಿ ಆರ್.ಎನ್. ಶ್ರೀಲತಾ ಅನುವಾದಿಸಿದ ಪುಸ್ತಕ, ನಿಜಗುಣ ಶಿವಯೋಗಿಗಳ ಬಗೆಗಿನ ಪುಸ್ತಕ, ವಿವೇಕ ಚಿಂತಾಮಣಿ, ವಿದುಷಿ ವೀಣಾ ಮೋಹನ ಅವರು ಬರೆದ 'ಸೈನ್ಸ್ ಇನ್ ಮ್ಯೂಸಿಕ್' ಪುಸ್ತಕ ಹಾಗೂ ಕಳೆದ ಐವತ್ತು ವರ್ಷಗಳಿಂದ ಗಾನಕಲಾಭೂಷಣ ಪ್ರಶಸ್ತಿ ಪುರಸ್ಕೃತರ ಪರಿಚಯವನ್ನೊಳಗೊಂಡ ಪುಸ್ತಕ.. ಎಲ್ಲವೂ ಈ ಸುವರ್ಣ ಸಂಭ್ರಮ ಸಮಾರಂಭದಲ್ಲಿ ಬಿಡುಗಡೆಯಾಗಲಿದೆ.

- ಗಾನಯಜ್ಞ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿ ಸಂಸ್ಥೆಯ ಕಾರ್ಯಕ್ರಮ, ಕಛೇರಿಗಳ ಮೂಲಕ ಅದನ್ನು ಜನಪ್ರಿಯವಾಗಿಸಿದಿರಿ. ಗಾನಯಜ್ಞದ ಬಗ್ಗೆ ಹೇಳಿ.

ಸಂಗೀತವನ್ನು ತಪಸ್ಸಿನಂತೆ ಭಾವಿಸಿ ನಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು ಗಾನಯಜ್ಞದ ವೈಶಿಷ್ಟ್ಯ. ಇಲ್ಲಿ ಒಂದೊಂದು ದಿನ ಒಂದೊಂದು ವಾಗ್ಗೇಯಕಾರರ ಏಳೇಳು ಕೃತಿಗಳನ್ನು ಹಾಡಲಾಗುತ್ತದೆ. ಜೊತೆಗೆ ವೇದಮಂತ್ರದ ಪಠಣವೂ ನಡೆಯುತ್ತದೆ. ಸಂಗೀತದಿಂದ ಬಾಂಧವ್ಯ ಬೆಸೆಯುವ ಕೆಲಸ ಇದರಿಂದ ಆಗುತ್ತದೆ. ಸಾಮಾನ್ಯವಾಗಿ ಬೆಳಗ್ಗಿನ ಹೊತ್ತೇ ನಡೆಯುವ ಈ ಗಾನಯಜ್ಞದಲ್ಲಿ ಎಲ್ಲರೂ ಪಾಲ್ಗೊಂಡಾಗ 'ನಾವೆಲ್ಲ ಒಂದೇ' ಎಂಬ ಭಾವನೆಯೂ ಮೊಳೆಯುತ್ತದೆ. ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಂಗೀತದಿಂದ ಸಾಧ್ಯ ಎಂಬುದನ್ನು ಗಾನಯಜ್ಞ ಸಾರಿ ಹೇಳುತ್ತದೆ.

- ಸುವರ್ಣ ಸಂಭ್ರಮದ ಹೈಲೈಟ್ಸ್ ಏನು?

ಸುವರ್ಣ ಸಂಭ್ರಮದ ರಾಜ್ಯಮಟ್ಟದ ಸಂಗೀತ ಸಮ್ಮೇಳನ 16 ದಿನಗಳ ಕಾಲ ನಡೆಯಲಿದ್ದು, ಫೆಬ್ರುವರಿ 1ರಿಂದ 16ರವರೆಗೆ ಬೆಂಗಳೂರಿನ ಎನ್. ಆರ್. ಕಾಲೊನಿ ರಾಮಮಂದಿರದಲ್ಲಿ ನಡೆಯಲಿದೆ. ಖ್ಯಾತ ಪಿಟೀಲು ವಿದ್ವಾಂಸರಾದ ಮೈಸೂರು ನಾಗರಾಜ್ ಹಾಗೂ ಮೈಸೂರು ಮಂಜುನಾಥ್ ಸಹೋದರರು ಸಮ್ಮೇಳನಾಧ್ಯಕ್ಷರು. ಇವರಿಗೆ 'ಗಾನಕಲಾಭೂಷಣ' ಬಿರುದು ನೀಡಲಾಗುತ್ತದೆ. ಖಂಜೀರ ಕಲಾವಿದ ಗುರುಪ್ರಸನ್ನ ಮತ್ತು ಘಟಂ ಕಲಾವಿದ ಗಿರಿಧರ ಉಡುಪ ಅವರಿಗೆ 'ಗಾನಕಲಾಶ್ರೀ' ಬಿರುದು ನೀಡಲಾಗುತ್ತದೆ. ಇವರಿಬ್ಬರೂ ಯುವ ವಿದ್ವಾಂಸರ ಸಮ್ಮೇಳನಾಧ್ಯಕ್ಷರು. 16 ದಿನಗಳೂ ವಿವಿಧ ಕಲಾವಿದರಿಂದ ಸಂಗೀತ ಕಛೇರಿಗಳು, ಪ್ರಾತ್ಯಕ್ಷಿಕೆ, ವಿದ್ವತ್ ಗೋಷ್ಠಿಗಳು, ಗಾನಯಜ್ಞ ನಡೆಯಲಿವೆ. ■